## ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಗೋವಿಂದರಾಜು ಇವರು ನಿಯಮ-72ರ ಮೇರೆಗೆ ನೀಡಿರುವ ಸೂಚನೆಗೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖಾ ಸಚಿವರ ಉತ್ತರ.

### ವಿಷಯ:

"ಕೇಂದ್ರ ಸರ್ಕಾರ ದ್ವಿತೀಯ ಹಂತದ ವಿಶೇಷಚೇತನ ಮಕ್ಕಳಿಗೆ ಸಮಗ್ರ ಶಿಕ್ಷಣ (ಐ.ಇ.ಡಿ.ಎಸ್. ಎಸ್) ಯೋಜನೆಯಲ್ಲಿ ನೀಡಲಾಗುವ ಅನುದಾನವನ್ನು ಶಿಕ್ಷಣ ಇಲಾಖೆಯಲ್ಲಿ ಕೆಲವು ಅಧಿಕಾರಿಗಳು 2.18 ಕೋಟಿ ರೂ. ಅಕ್ರಮ ಎಸಗಿದ್ದಾರೆ. ಇದರಲ್ಲಿ ಭಾಗಿಯಾದ ಆರೋಪ ಎದುರಿಸುತ್ತಿರುವ ಇಲಾಖೆ ಅಧಿಕಾರಿಗಳು, ಸಿಬ್ಬಂದಿ ಸೇರಿ 56 ಜನ ಹಾಗೂ 22 ಎನ್ ಜಿ ಓ ಗಳ ವಿರುದ್ಧ ಶಿಕ್ಷಣ ಇಲಾಖೆಯು ಪೊಲೀಸ್ ಠಾಣೆಯಲ್ಲಿ ಎಫ್ ಐ.ಆರ್. ದಾಖಲು ಮಾಡಿದೆ. ಆದರೆ ಇದರ ಬಗ್ಗೆ ಯಾವ ಕ್ರಮವಾಗಿದೆ ಎಂಬುದೇ ತಿಳಿಯುತ್ತಿಲ್ಲ.

ಕಂಪ್ಯೂಟರ್ ಶಿಕ್ಷಣ ನೀಡದೇ ಸರ್ಕಾರಕ್ಕೆ 109 ಕೋಟಿ ರೂ. ವ್ಯರ್ಥ ಮಾಡಿದ್ದ ಇಲಾಖೆ ಅಧಿಕಾರಿಗಳು, ಈ ಪ್ರಕರಣದಲ್ಲಿ ಕೋಟಿ ರೂ. ಅಕ್ರಮ ಎಸಗಿದ್ದಾರೆ. ಇಡೀ ಪ್ರಕರಣದಲ್ಲಿ ಹಲವಾರು ಶಿಕ್ಷಣಾಧಿಕಾರಿಗಳು ಕೈವಾಡವಿರುವುದನ್ನು ಶಿಕ್ಷಣ ಇಲಾಖೆ ಪತ್ತೆ ಹಚ್ಚಿದೆ. ಐಇಡಿಎಸ್ಎಸ್ ಯೋಜನೆಗಾಗಿ ಕೇಂದ್ರ ಸರ್ಕಾರ 18.39 ರೂ. ಬಿಡುಗಡೆ ಮಾಡಿದೆ. ಈ ಅನುದಾನವನ್ನು ಶಿಕ್ಷಣ ಇಲಾಖೆಯ ನಿರ್ದೇಶಕರ ಹಂತದ ಅಧಿಕಾರಿಗಳು ಹಂಚಿಕೆ ಮಾಡಿದ್ದಾರೆ. 2015 ರಲ್ಲಿ ಇದರ ಲೆಕ್ಕ ಪರಿಶೋಧನೆ ನಡೆದಿದ್ದು, ಈ ವೇಳೆಯಲ್ಲಿ 2.18 ಕೋಟಿ ರೂ. ಗಳಿಗೆ ಆಕ್ಷೇಪಣೆ ವ್ಯಕ್ತವಾಗಿದೆ. ಈ ಅಕ್ರಮದಲ್ಲಿ ಯಾವ ಯಾವ ಅಧಿಕಾರಿಗಳಿಗೆ ಶಿಕ್ಷೆಯಾಗಿದೆ ಹಾಗೂ ಅಕ್ರಮದ ಹಣವನ್ನು ಸರ್ಕಾರ ಹಿಂಪಡೆದುಕೊಂಡಿದೆಯೇ ಎಂಬುದು ಸ್ಪಷ್ಟವಾಗಿಲ್ಲ, ಈ ವಿಷಯವು ವಿಶೇಷ ಚೇತನ ಮಕ್ಕಳ ಹಿತದೃಷ್ಟಿಯಿಂದ ಮಾನ್ಯ ಪ್ರಾಥಮಿಕ ಮತ್ತು ಶಿಕ್ಷಣ ಇಲಾಖೆಯ ಸಚಿವರ ಗಮನ ಸೆಳೆಯಲು ಬಯಸುತ್ತೇನೆ".

### ಉತ್ತರ:

ಐ.ಇ.ಡಿ.ಎಸ್. ಎಸ್. ಯೋಜನೆಯು (Inclusive Education of the Disabled at Secondary Stage) ಕೇಂದ್ರ ಸರ್ಕಾರದ ಪುರಸ್ಕೃತ ಯೋಜನೆ ಆಗಿದ್ದು, ಐ.ಇ.ಡಿ.ಎಸ್.ಎಸ್. ಯೋಜನೆಯು ಕೇಂದ್ರ ಸರ್ಕಾರದ ಪುರಸ್ಕೃತ ಯೋಜನೆಯಾಗಿದ್ದು, ಕೇಂದ್ರ ಸರ್ಕಾರದಿಂದ ನೀಡಲಾದ ಅನುದಾನದ ಮೊತ್ತ 18.39 ಕೋಟಿ ರೂ. ಆಗಿರುತ್ತದೆ. ಈ ಯೋಜನೆಯಡಿ ವಿಶೇಷ ಚೇತನ ಮಕ್ಕಳಿಗೆ ಪ್ರೌಢ ಶಾಲಾ ಹಂತದ ಶಿಕ್ಷಣ ಪಡೆಯಲು ಸೌಲಭ್ಯಗಳನ್ನು ಕಲ್ಪಿಸುವುದಾಗಿರುತ್ತದೆ.

2009-10 ಮತ್ತು 2011-12ನೇ ಸಾಲಿನಲ್ಲಿ ಐ.ಇ.ಡಿ.ಎಸ್.ಎಸ್. ಯೋಜನೆ ಅನುಷ್ಠಾನಗೊಳಿಸುವಲ್ಲಿ ಕರ್ತವ್ಯ ಲೋಪ ಎಸಗಿರುವ ಒಟ್ಟು 56 ಅಧಿಕಾರಿಗಳ ವಿರುದ್ಧ ಹಾಗೂ 22 ಸ್ವಯಂ ಸೇವಾ ಸಂಸ್ಥೆಗಳ ವಿರುದ್ಧ ಹಲಸೂರು ಗೇಟ್ ಪೊಲೀಸ್ ಠಾಣೆ, ಬೆಂಗಳೂರು ಇಲ್ಲಿ ಎಫ್. ಐ.ಆರ್. ನ್ನು ದಾಖಲಿಸಲಾಗಿದೆ. (ಅಪರಾಧ ಸಂಖ್ಯೆ:0274/2023, ದಿನಾಂಕ:19/09/2023). ಸದರಿ ಪ್ರಕರಣದ ತನಿಖೆಗೆ ಅಗತ್ಯವಿರುವ ದಾಖಲೆಗಳನ್ನು ಮತ್ತು ಸಾಕ್ಷ್ಯಗಳನ್ನು ಹಲಸೂರು ಗೇಟ್ ಪೊಲೀಸ್ ಠಾಣೆಗೆ ಇಲಾಖೆಯಿಂದ ಒದಗಿಸಲಾಗಿದ್ದು, ಒಟ್ಟು 56 ಜನ ಆಪಾದಿತ ಅಧಿಕಾರಿಗಳ ವಿಚಾರಣೆಗೆ ಕ್ರಮ ಮಾಡಲಾಗಿದೆ ಎಂದು ಪೊಲೀಸ್ ಇಲಾಖೆಯಿಂದ ದಿನಾಂಕ:12/12/2023ರ ಪತ್ರದಲ್ಲಿ ತಿಳಿಸಿದ್ದು, ಅದರಂತೆ, ತನಿಖೆ ಪ್ರಗತಿಯಲ್ಲಿರುತ್ತದೆ.

2015ನೇ ವರ್ಷದಲ್ಲಿ ನಡೆದ ಆಡಿಟ್ ನಲ್ಲಿ ಕಂಡು ಬಂದಿರುವಂತೆ ಐ.ಇ.ಡಿ.ಎಸ್. ಎಸ್. ಯೋಜನೆಯಡಿ ಬಿಡುಗಡೆಯಾಗಿರುವ ಹಣವನ್ನು ನಿಯಮಾನುಸಾರ ಹಂಚಿಕೆ ಮಾಡದೇ ಒಟ್ಟು 2.18 ಕೋಟಿ ರೂ. ಗಳ ಅನುದಾನವನ್ನು ಸ್ವಯಂ ಸೇವಾ ಸಂಸ್ಥೆಗಳಿಗೆ ಹೆಚ್ಚುವರಿಯಾಗಿ ಬಿಡುಗಡೆ ಮಾಡಲಾಗಿದೆ ಎಂದು ಆಕ್ಷೇಪಿಸಲಾಗಿರುತ್ತದೆ. ಮಹಾಲೇಖಪಾಲರ ವರದಿಯ ಆಧಾರದ ಮೇಲೆ ಹೆಚ್ಚುವರಿ ಅನುದಾನವನ್ನು ಪಡೆದುಕೊಂಡ ಸ್ವಯಂ ಸೇವಾ ಸಂಸ್ಥೆಗಳಿಗೆ ತಿಳುವಳಿಕೆ ಪತ್ರವನ್ನು ನೀಡಿ ಆಕ್ಷೇಪಿತ ಮೊತ್ತವನ್ನು ಸರ್ಕಾರಕ್ಕೆ ಹಿಂತಿರುಗಿಸುವಂತೆ ತಿಳಿಸಲಾಗಿತ್ತು. ಕೆಲವು ಸ್ವಯಂ ಸೇವಾ ಸಂಸ್ಥೆಗಳು ಆಕ್ಷೇಪಿತ ಮೊತ್ತ ರೂ. 56,19,737/- ಗಳನ್ನು ಇಲಾಖೆಯ ಬ್ಯಾಂಕ್ ಖಾತೆಗೆ ಜಮೆ ಮಾಡಿರುತ್ತಾರೆ. ಉಳಿದ ಕೆಲವು ಸ್ವಯಂ ಸೇವಾ ಸಂಸ್ಥೆಗಳು ಆಕ್ಷೇಪಿತ ಮೊತ್ತವನ್ನು ಜಮೆ ಮಾಡುವುದು ಬಾಕಿ ಇರುತ್ತದೆ. ಪ್ರಕರಣದಲ್ಲಿನ 22 ಸ್ವಯಂ ಸೇವಾ ಸಂಸ್ಥೆಗಳ ಮಾನ್ಯತೆ ರದ್ಧತಿ ಮಾಡಲು ಸಹಕಾರ ಸಂಘಗಳ ಜಂಟಿ ನಿಬಂಧಕರು ಕೋರಲಾಗಿದ್ದು, ಅದರಂತೆ ಸದರಿ ಸಂಘಗಳ ಮಾನ್ಯತೆಯನ್ನು ರದ್ದು ಮಾಡಲು ಕ್ರಮವಹಿಸಲಾಗುತ್ತಿದೆ.

ಐ.ಇ.ಡಿ.ಎಸ್.ಎಸ್., ಯೋಜನೆಯ ಅನುಷ್ಠಾನದಲ್ಲಿ ಅಕ್ರಮ ಎಸಗಿರುವ ಒಟ್ಟು 56 ಆಪಾದಿತ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಇವರು ದಿನಾಂಕ:07/09/2020ರಂದು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಈ ಪ್ರಕರಣವು 2009-10 ಮತ್ತು 2011-12ನೇ ಸಾಲಿನಲ್ಲಿ ನಡೆದಿರುವ ಪ್ರಕರಣವಾಗಿರುತ್ತದೆ. ಕರ್ನಾಟಕ ನಾಗರೀಕ ಸೇವಾ ನಿಯಮಗಳು, 1958ರ ನಿಯಮ 214 (2)(ಬಿ)(2) ರನ್ವಯ ಆರೋಪದ ಘಟನೆಯು ನಡೆದು 04 ವರ್ಷಗಳು ಮೀರಿದ ಸಂದರ್ಭದಲ್ಲಿ ನಿವೃತ್ತ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಅವಕಾಶವಿಲ್ಲವಾದ್ದರಿಂದ ನಿವೃತ್ತಿ ಹೊಂದಿರುವ 40 ಅಧಿಕಾರಿಗಳನ್ನು ಹೊರತುಪಡಿಸಿ, ಕಾರ್ಯನಿರ್ವಹಿಸುತ್ತಿರುವ 16 ಅಧಿಕಾರಿಗಳ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಗಳು, 1957ರ ನಿಯಮ 13ನ್ನು ಒದಿಕೊಂಡಂತೆ ನಿಯಮ 11 ರಡಿ ಶಿಸ್ತು ಕ್ರಮ ಜರುಗಿಸಲು ದೋಷಾರೋಪಣಾ ಪಟ್ಟಿಯನ್ನು ಜಾರಿಮಾಡಲಾಗಿತ್ತು. ನಿವೃತ್ತ ಅಧಿಕಾರಿಗಳಿಂದ ದುರುಪಯೋಗವಾಗಿರುವ ಮೊತ್ತವನ್ನು ವಸೂಲಿ ಮಾಡಲು ಸದರಿ 40 ನಿವೃತ್ತ ನೌಕರರ ವಿರುದ್ಧ ಸಿವಿಲ್ ದಾವೆ ಹೂಡಲು ಕ್ರಮವಹಿಸಲಾಗುತ್ತಿದೆ.

ಸರ್ಕಾರದಿಂದ ನೀಡಲಾದ ದೋಷಾರೋಪಣಾ ಪಟ್ಟಿಯನ್ನು ಪ್ರಶ್ನಿಸಿ, 07 ಅಧಿಕಾರಿಗಳು ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿಯಲ್ಲಿ ಪ್ರಕರಣ ದಾಖಲಿಸಿರುತ್ತಾರೆ. ಈ ಪೈಕಿ 02 ಪ್ರಕರಣಗಳಲ್ಲಿ ದೋಷಾರೋಪಣಾ ಪಟ್ಟಿಗೆ ತಡೆಯಾಜ್ಞೆ ನೀಡಿದ್ದು, 04 ಅಧಿಕಾರಿಗಳ ವಿರುದ್ಧದ ದೋಷಾರೋಪಣಾ ಪಟ್ಟಿಯನ್ನು ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿಯು ರದ್ದುಪಡಿಸಿದೆ. 01 ಪ್ರಕರಣದಲ್ಲಿ ಅರ್ಜಿದಾರರ ಅರ್ಜಿಯನ್ನು ವಜಾಮಾಡಿದೆ.

ಆದ್ದರಿಂದ, ಈ ಪ್ರಕರಣದಲ್ಲಿನ 08 ಆಪಾದಿತರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಸರ್ಕಾರದ ಆದೇಶ ಸಂಖ್ಯೆ:ಇಡಿ 38 ಡಿಜಿಪಿ 2020, ದಿನಾಂಕ:19/12/2023ರಂದು ಶಿಸ್ತು ಕ್ರಮಕೈಗೊಳ್ಳಲು ಇಲಾಖಾ ವಿಚಾರಣಾಧಿಕಾರಿ ಹಾಗೂ ಮಂಡನಾಧಿಕಾರಿಯನ್ನು ನೇಮಿಸಿ ಆದೇಶಿಸಲಾಗಿರುತ್ತದೆ.

ಮುಂದುವರೆದು, ಕ್ರಿಮಿನಲ್ ಪ್ರಕರಣ ದಾಖಲಾಗಿರುವ ಅಧಿಕಾರಿಗಳ ಪೈಕಿ ಮಾನ್ಯ ನ್ಯಾಯಾಲಯದ ಆದೇಶ ಇಲ್ಲದಿರುವ ಮತ್ತು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಈ ಕೆಳಕಂಡ 05 ಅಧಿಕಾರಿಗಳನ್ನು ಸರ್ಕಾರದ ಆದೇಶ ಸಂಖ್ಯೆ:ಇಡಿ 38 ಡಿಜಿಪಿ 2020 (ಭಾಗ-2), ದಿನಾಂಕ:30/01/2024ರಲ್ಲಿ ಸೇವೆಯಿಂದ ಅಮಾನತ್ತುಗೊಳಿಸಲಾಗಿರುತ್ತದೆ.

1. ಶ್ರೀ ಎನ್. ಹೆಚ್. ನಾಗೂರ,ಹಿಂದಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಬಸವನ ಬಾಗೇವಾಡಿ ತಾಲ್ಲೂಕು, ಬಿಜಾಪುರ ಜಿಲ್ಲೆ ಪ್ರಸ್ತುತ ಉಪನಿರ್ದೇಶಕರು (ಆಡಳಿತ), ಶಾಲಾ ಶಿಕ್ಷಣ ಇಲಾಖೆ, ವಿಜಯಪುರ.
2. ಶ್ರೀ ಎ.ಬಿ. ಪುಂಡಲೀಕ, ಹಿಂದಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು ಬೆಳಗಾವಿ ನಗರ ತಾಲ್ಲೂಕು, ಬೆಳಗಾವಿ ಜಿಲ್ಲೆ ಹಾಗೂ ಉಪನಿರ್ದೇಶಕ ವೃಂದದ ಅಧಿಕಾರಿ, ಶಾಲಾ ಶಿಕ್ಷಣ ಇಲಾಖೆ, ಪ್ರಸ್ತುತ ಸ್ಥಳ ನಿರೀಕ್ಷಣೆ.
3. ಶ್ರೀ ಎಸ್.ಎ. ಮುಜಾವರ್, ಹಿಂದಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಿಂಧಗಿ ತಾಲ್ಲೂಕು, ಬಿಜಾಪುರ ಜಿಲ್ಲೆ ಪ್ರಸ್ತುತ ಹಿರಿಯ ಉಪನ್ಯಾಸಕರು ಡಯಟ್, ವಿಜಯಪುರ.
4. ಶ್ರೀ ಬಸವರಾಜ ಹೆಚ್. ಮಿಲ್ಲನಟ್ಟಿ, ಹಿಂದಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು ಬೈಲಹೊಂಗಲ ತಾಲ್ಲೂಕು, ಬೆಳಗಾವಿ ಜಿಲ್ಲೆ ಪ್ರಸ್ತುತ ಡಿ.ವೈ.ಪಿ.ಸಿ., ಉಪನಿರ್ದೇಶಕರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಬೆಳಗಾವಿ.
5. ಶ್ರೀ ಎ.ಎಸ್. ಹತ್ತಳ್ಳಿ, ಹಿಂದಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಇಂಡಿ ತಾಲ್ಲೂಕು, ಬಿಜಾಪುರ ಜಿಲ್ಲೆ ಪ್ರಸ್ತುತ ಹಿರಿಯ ಉಪನ್ಯಾಸಕರು, ಡಯಟ್, ವಿಜಯಪುರ.

**(ಮಧು ಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖಾ ಸಚಿವರು

ಸಂಖ್ಯೆ:ಇಪಿ 24 ಡಿಎಆರ್ 2024